## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ 21ನೇ ಅಖಿಲ ಭಾರತ ಅಂತರ – ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವ 2022–23 (ಅಗ್ರಿ ಯುನಿಫೆಸ್ಟ್ 2022–23)

******

ಪತ್ರಿಕಾ ಗೋಷ್ಠಿಯ ಅಧ್ಯಕ್ಷತೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ **ಡಾ: ಎಸ್.ವಿ.ಸುರೇಶ** ರವರು ವಹಿಸಿದ್ದರು. **ಡಾ. ಎನ್.ಬಿ. ಪ್ರಕಾಶ್,** ಡೀನ್ (ಕೃಷಿ), **ಡಾ: ಕೆ. ನಾರಾಯಣಗೌಡ,** ವಿಸ್ತರಣಾ ನಿರ್ದೇಶಕರು ಉಪಸ್ಥಿತರಿದ್ದರು.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, 21ನೇ ಅಖಿಲ ಭಾರತ ಅಂತರ – ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವ 2022–23 (ಅಗ್ರಿ ಯುನಿಫೆಸ್ಟ್ 2022–23)ಅನ್ನು 13 ರಿಂದ 17 ಮಾರ್ಚ್, 2023 ರವರೆಗೆ ಕೃವಿವಿ, ಜಿಕೆವಿಕೆ ಆವರಣದಲ್ಲಿ ಆಯೋಜಿಸುತ್ತಿದೆ. ಈ ಹಿಂದೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು 2008–09 ಮತ್ತು 2013–14ರಲ್ಲಿ ಕೃಷಿ ಯುವಜನೋತ್ಸವವನ್ನು ಆಯೋಜಿಸಿತ್ತು. ಭಾರತ ವಿವಿಧ ಭಾಷೆಗಳು, ಭೌಗೋಳಿಕ ಪ್ರದೇಶ, ಧಾರ್ಮಿಕ ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ವೈವಿಧ್ಯಮಯ ರಾಷ್ಟ್ರವಾಗಿದೆ ಮತ್ತು ಒಂದು ಶತಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ದೇಶದ ವಿವಿಧ ಭಾಗಗಳಲ್ಲಿ ವಿವಿಧ ಹಬ್ಬಗಳನ್ನು ಆಚರಿಸಲಾಗುತ್ತಿದೆ. ಅಗ್ರಿ ಯುನಿಫೆಸ್ಟ್ ಒಂದೇ ಸೂರಿನಡಿ ಎಲ್ಲಾ ಭಾರತೀಯ ಸಾಂಸ್ಕೃತಿಕ ಉತ್ಸವಗಳ ಸಂಯೋಜನೆಯಾಗಿದ್ದು ವಿವಿಧ ರಾಜ್ಯಗಳ ಕೃಷಿ ವಿದ್ಯಾರ್ಥಿಗಳು ಈ ವಾರ್ಷಿಕ ರಾಷ್ಟ್ರೀಯ ಉತ್ಸವದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ.

ಭಾರತೀಯ ಕೃಷಿ ಅನುಸಂದಾನ ಪರಿಷತ್, ನವದೆಹಲಿ ಅಖಿಲ ಭಾರತ ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವದ ಪರಿಕಲ್ಪನೆ ಮಾಡಿ 1999–2000 ರಿಂದ ಪ್ರಾರಂಭಿಸಿದೆ. ಯುವಜನೋತ್ಸವು ವಿವಿಧ ಭಾರತೀಯ ಸಂಸ್ಕೃತಿಗಳನ್ನು ಸಂಪರ್ಕಿಸುವ ಮೂಲಕ ಭಾರತೀಯ ಕೃಷಿಯನ್ನು ಸಂಯೋಜಿಸುವ ದೃಷ್ಟಿಯೊಂದಿಗೆ, ಕೃಷಿ ವಿಶ್ವವಿದ್ಯಾಲಯಗಳ ಯುವಕರಲ್ಲಿ ಪ್ರತಿಭೆಯನ್ನು ಬಳಸಿಕೊಳ್ಳಲು ಮತ್ತು ಭಾರತೀಯ ಸಾಂಸ್ಕೃತಿಕ ಸೌಂದರ್ಯವನ್ನು ಬಿಂಬಿಸುತ್ತದೆ. ವಾರ್ಷಿಕವಾಗಿ ಈ ಹಬ್ಬವನ್ನು ರಾಜ್ಯ ಮತ್ತು ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯಗಳು ಜಂಟಿಯಾಗಿ ಆಯೋಜಿಸುತ್ತವೆ. ಅಗ್ರಿ ಯುನಿಫೆಸ್ಟ್ 5 ದಿನಗಳ ಸಾಂಸ್ಕೃತಿಕ ಸಂಭ್ರಮದ ಹಬ್ಬವಾಗಿದ್ದು ದೇಶದ ವಿವಿಧ ಭಾಗಗಳಿಂದ 2000 ಪ್ರತಿಭಾವಂತ ಯುವಕರನ್ನು ಒಟ್ಟುಗೂಡಿಸುತ್ತದೆ.

ಒಟ್ಟು 59 ಕೃಷಿ ವಿಶ್ವವಿದ್ಯಾಲಯಗಳು / ಡೀಮ್ಡ್ ವಿಶ್ವವಿದ್ಯಾಲಯಗಳು/ ಕೇಂದ್ರೀಯ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು 5 ವಿಷಯಗಳಲ್ಲಿ 16 ಸ್ಪರ್ಧೆಗಳಲ್ಲಿ ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸುತ್ತಾರೆ. **ಸಂಗೀತದಲ್ಲಿ:** ಭಾರತೀಯ ಲಘು ಸಂಗೀತ, ಭಾರತೀಯ ಸಮೂಹ ಗಾಯನ (ದೇಶಭಕ್ತಿ ಗೀತೆ), ಭಾರತೀಯ ಸಮೂಹ ಗಾಯನ (ಜಾನಪದ ಗೀತೆ), **ನೃತ್ಯದಲ್ಲಿ:** ಸಮೂಹ ನೃತ್ಯ (ಜನಪದ), **ಸಾಹಿತ್ಯದಲ್ಲಿ:** ರಸಪ್ರಶ್ನೆ, ವಾಕ್ ಸ್ಪರ್ಧೆ, ಚರ್ಚಾ ಸ್ಪರ್ಧೆ ಮತ್ತು ಆಶುಭಾಷಣ ಸ್ಪರ್ಧೆ, **ರಂಗಭೂಮಿಯಲ್ಲಿ:** ಏಕಾಂಕ ನಾಟಕ, ಲಘು ಪ್ರಹಸನ, ಮೂಕಾಭಿನಯ ಮತ್ತು ಏಕ ಪಾತ್ರಾಭಿನಯ, **ಲಲಿತ ಕಲೆಯಲ್ಲಿ:** ಸ್ಥಳದಲ್ಲಿ ಚಿತ್ರ ರಚನೆ, ಬಿತ್ತಿ ಪತ್ರ ರಚನೆ, ತುಣುಕು ಚಿತ್ರ ರಚನೆ, ಮಣ್ಣಿನ ಆಕೃತಿ ರಚನೆ, ರಂಗೋಲಿ ಮತ್ತು ವ್ಯಂಗ ಚಿತ್ರ ರಚನೆ ಸ್ಪರ್ಧೆಗಳು ಜರುಗಲಿವೆ. ವಿದ್ಯಾರ್ಥಿಗಳು ಒಟ್ಟಿಗೆ ಭೇಟಿಯಾಗಲು ತಮ್ಮ ಪ್ರತಿಭೆ ಮತ್ತು ಕಾರ್ಯಕ್ಷಮತೆಯ ಕೌಶಲ್ಯಗಳನ್ನು ಪ್ರದರ್ಶಿಸಲು ಇದು ಅತ್ಯುತ್ತಮ ವೇದಿಕೆಯಾಗಿದೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವಿದ್ಯಾರ್ಥಿಗಳು 2003–04, 2008–09, 2009–10 ಮತ್ತು 2010–11ರಲ್ಲಿ ಜರುಗಿದ ಯುವಜನೋತ್ಸವದಲ್ಲಿ ಒಟ್ಟಾರೆ ಚಾಂಪಿಯನ್‌ಶಿಪ್‌ಯಾಗಿರುತ್ತಾರೆ.

ಛತ್ತೀಸ್‌ಗಢ, ರಾಯ್‌ಪುರದ ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಜರುಗಿದ 20ನೇ ಅಗ್ರಿ ಯುನಿಫೆಸ್ಟ್‌ನಲ್ಲಿ ಓರಿಸ್ಸಾ, ಕೃಷಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಭುವನೇಶ್ವರ, ಒಟ್ಟಾರೆ ಚಾಂಪಿಯನ್, ವಸಂತರಾವ್ ನಾಯಕ್ ಕೃಷಿ ವಿಶ್ವವಿದ್ಯಾನಿಲಯ, ಪರ್ಭಾನಿ, ಮಹಾರಾಷ್ಟ್ರ – ಒಟ್ಟಾರೆ ರನ್ನರ್ಸ್, ಪಂಜಾಬ್ ಕೃಷಿ ವಿಶ್ವವಿದ್ಯಾನಿಲಯ – ಮೂರನೇ ಸ್ಥಾನ ಮತ್ತು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – ನಾಲ್ಕನೇ ಸ್ಥಾನ ಪಡೆದಿರುತ್ತವೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಸಮೂಹ ನೃತ್ಯ (ಜನಪದ) ಮತ್ತು ಏಕ ಪಾತ್ರಾಭಿನಯದಲ್ಲಿ ಪ್ರಥಮ ಬಹುಮಾನ, ಲಘು ಪ್ರಹಸನದಲ್ಲಿ ದ್ವಿತೀಯ ಬಹುಮಾನ ಮತ್ತು ಏಕಾಂಕ ನಾಟಕದಲ್ಲಿ ತೃತೀಯ ಬಹುಮಾನ ಪಡೆದಿರುತ್ತಾರೆ.

15–3–2023 (ಬುಧವಾರ) ಬೆಳಗ್ಗೆ 11.00 ಗಂಟೆಗೆ 21ನೇ ಅಗ್ರಿ ಯುನಿಫೆಸ್ಟ್–2023 ಅನ್ನು ಡಾ: ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಭವನದಲ್ಲಿ **ಶ್ರೀ ಬಸವರಾಜ ಬೊಮ್ಮಾಯಿ** ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ರವರು ಉದ್ಘಾಟನೆ ಮಾಡಲಿದ್ದಾರೆ. **ಶ್ರೀ ನರೇಂದ್ರ ಸಿಂಗ್ ತೋಮರ್,** ಸನ್ಮಾನ್ಯ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು, ಭಾರತ ಸರ್ಕಾರ, **ಸುಶ್ರೀ ಶೋಭಾ ಕರಂದ್ಲಾಜೆ,** ಸನ್ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವರು, ಭಾರತ ಸರ್ಕಾರ, **ಶ್ರೀ ಕೈಲಾಶ್ ಚೌಧರಿ,** ಸನ್ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವರು, ಭಾರತ ಸರ್ಕಾರ, **ಶ್ರೀ. ಬಿ.ಸಿ. ಪಾಟೀಲ್,** ಸನ್ಮಾನ್ಯ ಕೃಷಿ ಸಚಿವರು, ಸರ್ಕಾಟಕ ಸರ್ಕಾರ ಮತ್ತು ಸಹ ಕುಲಾಧಿಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, **ಶ್ರೀ ಕೆ.ಸಿ. ನಾರಾಯಣ ಗೌಡ,** ಸನ್ಮಾನ್ಯ ಕ್ರೀಡೆ, ಯುವಜನ ಮತ್ತು ರೇಷ್ಮೆ ಸಚಿವರು, ಕರ್ನಾಟಕ ಸರ್ಕಾರ, **ಶ್ರೀ ವಿ. ಸುನೀಲ್ ಕುಮಾರ್,** ಸನ್ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ, **ಶ್ರೀ ಡಿ.ವಿ. ಸದಾನಂದಗೌಡ,** ಸನ್ಮಾನ್ಯ ಲೋಕಸಭಾ ಸದಸ್ಯರು, ಬೆಂಗಳೂರು ಉತ್ತರ ಹಾಗೂ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಮತ್ತು **ಡಾ: ಹಿಮಾಂಶು ಪಾಠಕ್,** ಸನ್ಮಾನ್ಯ ಕಾರ್ಯದರ್ಶಿಗಳು, ಕೃ.ಸಂ.ಶಿ.ಇ. ಮತ್ತು ಮಹಾ ನಿರ್ದೇಶಕರು, ಭಾ.ಕೃ.ಅ.ಪ, ನವದೆಹಲಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. **ಡಾ: ಆರ್.ಸಿ. ಅಗರವಾಲ್,** ಉಪ ಮಹಾನಿರ್ದೇಶಕರು(ಕೃಷಿ ಶಿಕ್ಷಣ), ಭಾ.ಕೃ.ಅ.ಪ, ನವದೆಹಲಿ ಮತ್ತು **ಡಾ: ಎಸ್.ವಿ.ಸುರೇಶ,** ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ರವರು ಉಪಸ್ಥಿತರಿರುತ್ತಾರೆ. **ಶ್ರೀ ಕೃಷ್ಣ ಬೈರೇಗೌಡ,** ಸನ್ಮಾನ್ಯ ವಿಧಾನಸಭಾ ಸದಸ್ಯರು, ಬ್ಯಾಟರಾಯನಪುರ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ದಿನಾಂಕ:17–3–2023 ರಂದು (ಶುಕ್ರವಾರ) ಮಧ್ಯಾಹ್ನ 3.30 ಗಂಟೆಗೆ ಡಾ: ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಭವನದಲ್ಲಿ ಜರುಗುವ ಸಮಾರೋಪ ಸಮಾರಂಭಕ್ಕೆ **ಶ್ರೀ. ಬಿ.ಸಿ. ಪಾಟೀಲ್,** ಸನ್ಮಾನ್ಯ ಕೃಷಿ ಸಚಿವರು, ಸರ್ಕಾಟಕ ಸರ್ಕಾರ ಮತ್ತು ಸಹ ಕುಲಾಧಿಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, **ಶ್ರೀ ಕೆ.ಸಿ. ನಾರಾಯಣ ಗೌಡ,** ಸನ್ಮಾನ್ಯ ಕ್ರೀಡೆ, ಯುವಜನ ಮತ್ತು ರೇಷ್ಮೆ ಸಚಿವರು, ಕರ್ನಾಟಕ ಸರ್ಕಾರ, **ಶ್ರೀ ವಿ. ಸುನೀಲ್ ಕುಮಾರ್** ಸನ್ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ, **ಡಾ: ಹಿಮಾಂಶು ಪಾಠಕ್,** ಸನ್ಮಾನ್ಯ ಕಾರ್ಯದರ್ಶಿಗಳು, ಕೃ.ಸಂ.ಶಿ.ಇ. ಮತ್ತು ಮಹಾ ನಿರ್ದೇಶಕರು, ಭಾ.ಕೃ.ಅ.ಪ, ನವದೆಹಲಿ ಮತ್ತು **ಡಾ: ಆರ್.ಸಿ. ಅಗರವಾಲ್,** ಉಪ ಮಹಾನಿರ್ದೇಶಕರು(ಕೃಷಿ ಶಿಕ್ಷಣ), ಭಾ.ಕೃ.ಅ.ಪ, ನವದೆಹಲಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. **ಡಾ: ಎಸ್.ವಿ.ಸುರೇಶ,** ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ರವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

––***––

# $21^{st}$ All India Inter – Agricultural Universities Youth Festival 2022-23 ($21^{st}$ Agri. Unifest – 2023) at UAS, Bangalore

*****

The Press Meet was chaired by **Dr. S.V.Suresha**, Vice-Chancellor, UAS, GKVK, Bangalore, **Dr. N.B. Prakash**, Dean(Agri.), **Dr. K. Narayana Gowda**, Director of Extension were also present.

The University of Agricultural Sciences, Bangalore is privileged to host All India Agricultural Universities Youth Festival - 2022-23 ($21^{st}$ Agri. Unifest) for the third time in 24 years from 13-$17^{th}$ March 2023 at GKVK Campus. Earlier UAS, Bangalore organized Agri Unifest during 2008-09 and 2013-2014.

India, a nation of incredible cultural diversity between languages, geographic regions, religious traditions and social stratifications and is a nest of over a billion people. Varied festivals are celebrated in different parts of the country. Agri Unifest is the amalgamation of all Indian cultural festivals under one umbrella, where agricultural students from different states will showcase their talents in a yearly national mega event.

All India Inter Agricultural Universities Youth Festival was conceptualized and introduced by the Indian Council of Agricultural Research (ICAR) during 1999-2000, with a vision of integrating Indian agriculture by connecting different Indian cultures, to harness talents among the youth of Agricultural Universities and to depict the beauty of Indian cultural diversity. This festival is annually celebrated jointly by the State as well as Central Agricultural Universities. The prestigious Agri. Unifest, a five days cultural extravaganza, would bring together over 2000 talented youth from different parts of the country.

Students from **59** Agricultural Universities / Deemed Universities/ Central Universities will showcase their skills in *eighteen events* under five themes viz., Music, Dance, Literary, Theatre and Fine arts. In Music: Light Vocal (India), Patriotic song (Indian) and Group song (Indian) events, In Dance: Group Dance (Folk) event, In Literary: Quiz, Elocution, Debate and Extempore events, In Theatre: One act play, Skit, Mime and Momo Acting events and In Fine Arts: On the Spot painting, Poster Making, Collage, Clay modelling, Rangoli and Cartooning events will be held. This is an

excellent opportunity for the students to meet together exhibit their talents and skills of performance.

It is proud to mention that UAS, Bangalore students have bagged overall championship in Agri unifests conducted during 2003-04, 2008-09, 2009-10 and 2010-11.

20$^{th}$ Agri Unifest was organized by Indira Gandhi Krishi Vishwavidyalaya, Raipur, Chhattisgarh for the year 2019-20. Orissa University of Agriculture & Technology, Bhubaneswar, Orissa - Overall Champion, Vasantrao Nayak Krishi Vishwavidyalaya (VNKV), Parbhani, Maharastra - Overall Runners, Punjab Agriculture University, Punjab - Third Place and University of Agricultural Sciences, Bangalore - Fourth Place. UAS, Bangalore secured first prize in Group dance (Folk) and Mono Acting. Secured Second place in Skit and Third place in One Act play.

On 15-3-2023 (Wednesday) at 11.00am the 21st Agri Unifest – 2023 will be inaugurated by **Shri Basavaraj Bommai,** Hon'ble Chief Minister, Government of Karnataka, **Shri. Narendra Singh Tomar,** Hon'ble Union Minister of Agriculture and Farmer' Welfare, Govt. of India, **Sushri. Shobha Karandlaje,** Hon'ble Minister of State, Ministry of Agriculture and Farmers' Welfare, Govt. of India, **Shri. Kailash Choudhary**, Hon'ble Minister of State, Ministry of Agriculture and Farmers' Welfare, Govt. of India, **Shri B.C. Patil**, Hon'ble Minister of Agriculture, Government of Karnataka and Pro-Chancellor of UAS, Bangalore, **Shri. K.C. Narayana Gowda,** Hon'ble Minister for Sericulture, Youth Empowerment and Sports, GoK, **Shri. V. Sunil Kumar,** Hon'ble Minister of Energy, Kannada and Culture, Govt. of Karnataka, **Shri. D.V. Sadananda Gowda,** Hon'ble Member of Parliament, Bengaluru North & Formed Chief Minister, Govt. Karnataka and **Dr. Himanshu Pathak,** Secretary, DARE & Director General, ICAR, New Delhi will be the Chief Guests. **Dr. R.C. Agrawal,** Deputy Director General (Agril. Education), ICAR, New Delhi and **Dr. S.V. Suresha,** Vice-Chancellor, UAS(B), will also present. **Shri Krishna Byregowda,** Hon'ble Member of Legislative Assembly, Byatarayanapura will preside over the function.

On 17-3-2023 (Friday) at 3.30 pm the Valedictory function will be held. **Shri B.C. Patil,** Hon'ble Minister of Agriculture Government of Karnataka and Pro-Chancellor of UAS, Bangalore, **Shri. K.C. Narayana Gowda**, Hon'ble Minister for Sericulture, Youth Empowerment and Sports, Govt. of Karnataka, **Shri. V. Sunil**

**Kumar,** Hon’ble Minister of Energy Kannada and Culture, Govt. of Karnataka. **Dr. Himanshu Pathak,** Secretary, DARE & Director General, ICAR, New Delhi and **Dr. R.C. Agrawal,** Deputy Director General (Agril. Education), ICAR, New Delhi will be the Chief Guests. **Dr. S.V. Suresha**, Vice-Chancellor, UAS(B) will preside over the function.

--**--